ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001

E-Mail: prydirector.edu.sgkar@nic.in

ಸಂಖ್ಯೆ : ಸಿ7(8)ಪ್ರಾಶಿಅ/ಆರ್.ಟಿ.ಇ/ಶುಲ್ಕ ಮರುಪಾವತಿ/2018-19 ದಿನಾಂಕ: 12-12-2018

-: ಜ್ಞಾಪನ :-

ವಿಷಯ: ಶಿಕ್ಷಣ ಹಕ್ಕು ಕಾಯಿದೆಯಡಿ 2016-17,2017-18 ಮತ್ತು 2018-19 ನೇ ಸಾಲಿನಲ್ಲಿ ಶುಲ್ಕ ಮರು ಪಾವತಿಗಾಗಿ ತಂತ್ರಾಂಶದ ಮೂಲಕ ಬೇಡಿಕೆ ಸಲ್ಲಿಸಲು ಕ್ರಮ ವಹಿಸುವ ಬಗ್ಗೆ.

ಉಲ್ಲೇಖ: 1. ಈ ಕಛೇರಿ ಸಮಸಂಖ್ಯೆ ಸುತ್ತೋಲೆ ದಿನಾಂಕ:09-11-2018.
2. ಮಾನ್ಯ ಆಯುಕ್ತರ ಆಪ್ತ ಶಾಖೆಯ ಟಿಪ್ಪಣಿ ಸಂಖ್ಯೆ:ಆ.ಆಶಾ. ಆರ್.ಟಿ.ಇ.ಶು.ಮ/2018-19, ದಿನಾಂಕ:30-11-2018

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2018-19 ನೇ ಸಾಲಿನಲ್ಲಿ ಶಿಕ್ಷಣ ಹಕ್ಕು ಕಾಯಿದೆ ಅಡಿ ಶುಲ್ಕಮರುಪಾವತಿ ತಂತ್ರಾಂಶವನ್ನು ದಿನಾಂಕ:09.11.2018 ರಂದು ಇಲಾಖಾ ವೆಬ್‌ಸೈಟ್ www.schooleducation.kar.nic.in ನಲ್ಲಿ ಪ್ರಕಟಿಸಲಾಗಿದ್ದು, ಬಹುತೇಕ ಶಾಲೆಗಳು ಇದುವರೆಗೂ ಮಾಹಿತಿ ಸಲ್ಲಿಸಿರುವುದಿಲ್ಲವಾದ್ದರಿಂದ ಕೂಡಲೇ ತುರ್ತು ಕ್ರಮ ವಹಿಸುವುದು ಹಾಗೂ 2018-19ನೇ ಸಾಲಿನ ಶುಲ್ಕ ಮರುಪಾವತಿಗೆ ಕೊನೆಯ ದಿನಾಂಕ: **31.12.2018** ಆಗಿರುತ್ತದೆ.

2016-17 ಮತ್ತು 2017-18 ನೇ ಸಾಲಿನಲ್ಲಿ ಶಿಕ್ಷಣ ಹಕ್ಕು ಕಾಯಿದೆ ಅಡಿ ಶುಲ್ಕಮರುಪಾವತಿ ತಂತ್ರಾಂಶ ಮತ್ತು ಅಪೀಲು ತಂತ್ರಾಂಶವನ್ನು ಈಗಾಗಲೇ ಬಿಡುಗಡೆ ಮಾಡಿದ್ದು, ರಾಜ್ಯದ ಎಲ್ಲಾ ಆರ್.ಟಿ.ಇ. ಶಾಲಾ ಮುಖ್ಯಸ್ಥರು ಅಪೀಲು ತಂತ್ರಾಂಶಕ್ಕೆ ಸಂಬಂಧಿಸಿದಂತೆ ತುರ್ತುಕ್ರಮ ವಹಿಸುವುದು ಹಾಗೂ ಅಪೀಲು ತಂತ್ರಾಂಶವನ್ನು ಬಳಸಲು ಕೊನೆಯ ದಿನಾಂಕ **15.12.2018** ಆಗಿರುತ್ತದೆ.

ಆದುದರಿಂದ ಅತೀ ತುರ್ತಾಗಿ ಶಾಲೆಗಳಿಂದ ತಂತ್ರಾಂಶದ ಮೂಲಕ ಆನ್‌ಲೈನ್‌ನಲ್ಲಿ 2018-19ನೇ ಸಾಲಿನ ಶುಲ್ಕಮರುಪಾವತಿಗೆ ಹಾಗೂ 2016-17 ಮತ್ತು 2017-18ನೇ ಸಾಲಿನ ಅಪೀಲು ತಂತ್ರಾಂಶಕ್ಕೆ ಸಂಬಂಧಿಸಿದಂತೆ ತಮ್ಮ ತಮ್ಮ ಆಡಳಿತ ವ್ಯಾಪ್ತಿಯಲ್ಲಿ ಅಗತ್ಯ ಕ್ರಮಕೈಗೊಳ್ಳಲು ಉಪನಿರ್ದೇಶಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಿಳಿಸಲಾಗಿದೆ.

ಮುಂದುವರೆದು ಕ್ಷೇತ್ರ ಶಿಕ್ಷಣಾಧಿಕಾರಿಗಳು ಶುಲ್ಕ ಮರುಪಾವತಿಗಾಗಿ ಅಪ್‌ಲೋಡ್ ಮಾಡಿರುವಂತಹ ದಾಖಲೆಗಳು ತಂತ್ರಾಂಶದಲ್ಲಿದ್ದರೂ ಹಾರ್ಡ್ ಕಾಪಿಯನ್ನು (ಉದಾ: ಬ್ಯಾಂಕ್ ಪಾಸ್ ಪುಸ್ತಕ, ಆರ್.ಟಿ.ಇ ಮಕ್ಕಳ ವಿವರದ ಪಟ್ಟಿ, ತರಗತಿವಾರು / ಜಾತಿವಾರು ವಿವರ, ಎಸ್.ಎ.ಟಿ.ಎಸ್. ಮಾಹಿತಿ ಖರ್ಚು ಮಾಡಿರುವ ಬಗ್ಗೆ ಧೃಡೀಕರಣ ಪತ್ರಗಳು ಇತ್ಯಾದಿ) ನೀಡಲು ತಿಳಿಸಿರುವುದು ಗಮನಕ್ಕೆ ಬಂದಿದ್ದು, ಆನ್‌ಲೈನ್‌ನಲ್ಲೇ ಅಪ್‌ಲೋಡ್ ಮಾಡಿರುವಂತಹ ದಾಖಲೆಗಳನ್ನು ಪರಿಶೀಲಿಸಿ ಕ್ರಮ ವಹಿಸುವುದು. ಇಂತಹ ಒತ್ತಾಯದ ಬಗ್ಗೆ ದೂರುಗಳು ಬಂದಲ್ಲಿ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು/ ಉಪನಿರ್ದೇಶಕರ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲಾಗುವುದು

(ಡಾ॥ ಪಿ.ಸಿ. ಜಾಫರ್)
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ.

**ಇವರಿಗೆ,**

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ತಾಲ್ಲೂಕು / ವಲಯಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರಿಗೆ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಅಲ್ಪಸಂಖ್ಯಾತವಲ್ಲದ ಅನುದಾನರಹಿತ ಖಾಸಗಿ ಶಾಲಾ ಮುಖ್ಯಸ್ಥರು / ಆಡಳಿತ ಮಂಡಳಿಯವರಿಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ

**ಪ್ರತಿಯನ್ನು:**

1. ಆಯುಕ್ತರ ಆಪ್ತ ಕಾರ್ಯದರ್ಶಿಗಳು, ಆಯುಕ್ತರ ಕಛೇರಿ ಸಾ.ಶಿ.ಇ, ಬೆಂಗಳೂರು ಇವರಿಗೆ ಕಳುಹಿಸುತ್ತಾ ಮಾನ್ಯ ಆಯುಕ್ತರ ಗಮನಕ್ಕೆ ತರಲಾಗಿದೆ.
2. ಮುಖ್ಯಸ್ಥರು, ಎಸ್.ಎ.ಟಿಎಸ್ ವಿಭಾಗ, ಸಮಗ್ರ ಶಿಕ್ಷಣ ಅಭಿಯಾನ, ನೃಪತುಂಗ ರಸ್ತೆ ಇವರಿಗೆ ಕಳುಹಿಸುತ್ತಾ ಎಸ್.ಎ.ಟಿ.ಎಸ್ ಸಂಬಂಧಿಸಿದಂತೆ ಇ-ಮೇಲ್, ಪತ್ರಗಳ ಮುಖಾಂತರ ಬರುವ ದೂರುಗಳ ಬಗ್ಗೆ ಮತ್ತು ಆರ್.ಟಿ.ಇ ಮಕ್ಕಳ ಮಾಹಿತಿಯನ್ನು ಅಪ್‌ಡೇಟ್‌ಗೊಳಿಸಿ ಇ-ಅಡಳಿತ ಶಾಖೆಗೆ ವೆಬ್ ಸರ್ವೀಸ್ ಮುಖಾಂತರ ಒದಗಿಸಲು ತಿಳಿಸಿದೆ.
3. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಆಯುಕ್ತರ ಕಛೇರಿ, ಸಾ.ಶಿ.ಇ ಇವರಿಗೆ ಕಳುಹಿಸುತ್ತಾ ಶಾಲಾ ಹಂತದಲ್ಲಿ ತಾಂತ್ರಿಕ ಸಮಸ್ಯೆಗಳ ಬಗ್ಗೆ ಇಮೇಲ್, ಪತ್ರಗಳ ಮುಖಾಂತರ ಬಂದಿರುವ ದೂರುಗಳ ಬಗ್ಗೆ ತುರ್ತಾಗಿ ಕ್ರಮವಹಿಸುವುದು ಅಲ್ಲದೇ ಎಸ್.ಎ.ಟಿ.ಎಸ್ ಮುಖಾಂತರ ಅಋ.ಟಿ.ಇ ಮಕ್ಕಳ ವಿವರಗಳನ್ನು ಪಡೆದು ಅಪ್‌ಡೇಟ್ ಗೊಳಿಸಲು ತುರ್ತು ಕ್ರಮವಹಿಸುವುದು.
4. ಕಛೇರಿ ಪ್ರತಿ.